**All India Radio: Bangalore**
**National Bulletin In Kannada**
**17.03.2026 13.10 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**17.03.2026 13.10 hrs**

**<>><><*><><<>**

ಮುಖ್ಯಾಂಶಗಳು

**೧. ಗುಜರಾತ್‌ನ ವಡಿನಾರ್ ಬಂದರು ತಲುಪಿದ ಎಲ್‌ಪಿಜಿ ಅನಿಲ ಹೊತ್ತ ನಂದಾದೇವಿ ಸರಕು ಸಾಗಾಣೆ ಹಡಗು**

**೨. ಜೀವನದಲ್ಲಿ ಅವಕಾಶ ಸೃಷ್ಟಿಸುವ ಮತ್ತು ಯಶಸ್ಸಿನ ಹಾದಿ ಸುಮಗೊಳಿಸುವ ನಿರ್ಣಾಯಕ ಸಾಧನ ಶಿಕ್ಷಣ - ರಾಷ್ಟ್ರಪತಿ ದ್ರೌಪದಿ ಮುರ್ಮು**

**೩. ಇಸ್ಲಾಮೊಫೋಬಿಯೊ ಕುರಿತು ಪಾಕಿಸ್ತಾನದ ನಡೆ ಬಗ್ಗೆ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಭಾರತ ಆಕ್ಷೇಪ**

**೪. ರೈತರಿಗೆ ಪಾರದರ್ಶಕ ಮತ್ತು ಸಕಾಲಿಕ ವಿಮಾ ಹಕ್ಕು ಇತ್ಯರ್ಥಕ್ಕೆ ಪಿಎಂ ಫಸಲ್ ಬಿಮಾ ಯೋಜನೆಯಲ್ಲಿ ಬದಲಾವಣೆ**

**೫. ಆರ್ಲಿಯೆನ್ಸ್ ಮಾಸ್ಟರ್ಸ್ ಸೂಪರ್-೩೦೦ ಬ್ಯಾಡ್ಮಿಂಟನ್ ಟೂರ್ನಿ ; ಇಂದು ಭಾರತೀಯ ಶಟ್ಲರ್‌ಗಳು ಕಣದಲ್ಲಿ**

**<>><><*><><<>**

ಗುಜರಾತ್‌ನ ದೇವಭೂಮಿ ದ್ವಾರಕ ಜಿಲ್ಲೆಯ ವಡಿನಾರ್ ಬಂದರಿಗೆ ನಂದಾದೇವಿ ಎಲ್‌ಪಿಜಿ ಟ್ಯಾಂಕರ್ ನೌಕೆಯು ಯಶಸ್ವಿಯಾಗಿ ಬಂದು ತಲುಪಿದೆ. ಕತಾರ್‌ನಿಂದ ಹೊರಟಿದ್ದ ಈ ಬೃಹತ್ ಹಡಗು ಹರ್ಮೂಜ್ ಜಲಸಂಧಿಯ ಮೂಲಕ ಸಂಚರಿಸಿ ಸುಮಾರು ೪೬ ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿ ಅನಿಲವನ್ನು ಹೊತ್ತು ತಂದಿದೆ. ಬಂದರಿನಲ್ಲಿ ಈಗಾಗಲೇ ಈ ಇಂಧನ ಇಳಿಸುವ ಪ್ರಕ್ರಿಯೆ ಆರಂಭವಾಗಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ಇದೇ ರೀತಿ ನಿನ್ನೆ ಮತ್ತೊಂದು ಎಲ್‌ಪಿಜಿ ಟ್ಯಾಂಕರ್ ಮುಂದ್ರ ಬಂದರಿಗೆ ಬಂದು ತಲುಪಿತ್ತು. ಈ ಎರಡು ಪ್ರಮುಖ ಸರಕು ಸಾಗಾಣೆ ನೌಕೆಗಳು ಆಗಮಿಸಿರುವುದು ದೇಶದ ಅನಿಲ ಸಂಗ್ರಹವನ್ನು ಗಣನೀಯವಾಗಿ

ಹೆಚ್ಚಿಸಲಿದೆ. ಈ ನಡುವೆ ಅನಿಲ ಪೂರೈಕೆ ಸರಪಳಿಯಲ್ಲಿ ಯಾವುದೇ ಕೊರತೆಯಿಲ್ಲ ಎಂದು ಅಧಿಕಾರಿಗಳು ಸಾರ್ವಜನಿಕರಿಗೆ ಭರವಸೆ ನೀಡಿದ್ದಾರೆ.

**<>><><*><><<>**

ಶಿಕ್ಷಣ ಜೀವನದಲ್ಲಿ ಅವಕಾಶಗಳನ್ನು ಸೃಷ್ಟಿಸುವ ಮತ್ತು ಯಶಸ್ಸಿನ ಹಾದಿಯನ್ನು ಸುಗಮಗೊಳಿಸುವ ಅತ್ಯಂತ ನಿರ್ಣಾಯಕ ಸಾಧನವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ನವದೆಹಲಿಯಲ್ಲಿಂದು ಅಕ್ಷಯಪಾತ್ರ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಬಲೀಕರಣ ಮತ್ತು ಸಾಮರ್ಥ್ಯ ವೃದ್ಧಿಯ ಪ್ರಕ್ರಿಯೆ ಶಾಲಾ-ಶಿಕ್ಷಣದ ಹಂತದಲ್ಲಿಯೇ ರೂಪುಗೊಳ್ಳಲು ಪ್ರಾರಂಭಿಸುತ್ತದೆ ಎಂದು ತಿಳಿಸಿದರು. ಕೇಂದ್ರ ಸರ್ಕಾರ ಪಿಎಂ ಪೋಷಣ್ ಶಕ್ತಿ ನಿರ್ಮಾಣ ಹೆಸರಿನಲ್ಲಿ ವಿಶ್ವ ಅತಿದೊಡ್ಡ ಮಧ್ಯಾಹ್ನ ಬಿಸಿಯೂಟದ ಯೋಜನೆಯನ್ನು ಜಾರಿಗೊಳಿಸಿದೆ. ಆರೋಗ್ಯವಂತ ಮತ್ತು ಬಲಿಷ್ಠ ರಾಷ್ಟ್ರ ನಿರ್ಮಿಸುವ ನಿಟ್ಟಿನಲ್ಲಿ ಇದು ಪ್ರಮುಖ ಹೆಜ್ಜೆಯಾಗಿದ್ದು, ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಅಡ್ಡಿಯಾಗುತ್ತಿರುವ ಪೌಷ್ಠಿಕಾಂಶದ ಕೊರತೆಯನ್ನು ನೀಗಿಸಲು ಈ ಉಪಕ್ರಮ ಸಹಕಾರಿಯಾಗಿದೆ ಎಂದು ತಿಳಿಸಿದರು.

**ಧ್ವನಿ: ರಾಷ್ಟ್ರಪತಿ ದ್ರೌಪದಿ ಮುರ್ಮು ( ೨೭ ಸೆಕೆಂಡ್ಸ್)**

**<>><><*><><<>**

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಂತಾರಾಷ್ಟ್ರೀಯ ಇಸ್ಲಾಮೊಫೊಬಿಯಾ ವಿರೋಧಿ ದಿನದ ಅಂಗವಾಗಿ ನಡೆದ ಸಭೆಯಲ್ಲಿ ಭಾರತವು ಪಾಕಿಸ್ತಾನದ ದ್ವಂದ್ವ ನೀತಿಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ನೆರೆಯ ರಾಷ್ಟ್ರಗಳಲ್ಲಿ ಇಸ್ಲಾಮೋಫೋಬಿಯಾ ನಡೆಯುತ್ತಿದೆ ಎಂದು ಕಾಲ್ಪನಿಕ ಕಥೆಗಳನ್ನು ಕಟ್ಟುವುದು ಪಾಕಿಸ್ತಾನಕ್ಕೆ ಅಭ್ಯಾಸವಾಗಿಬಿಟ್ಟಿದೆ ಎಂದು ಟೀಕಿಸಿರುವ ಭಾರತ, ತನ್ನದೇ ದೇಶದ ಅಲ್ಪಸಂಖ್ಯಾತ ಅಹ್ಮದೀಯ ಸಮುದಾಯದ ಮೇಲೆ ನಡೆಸುತ್ತಿರುವ ಕ್ರೂರ ದಮನ ನೀತಿ ಮತ್ತು ರಂಜಾನ್ ಸಮಯದಲ್ಲಿ ಅಫ್ಘಾನಿಸ್ತಾನದ ಮೇಲೆ ನಡೆಸಿದ ವೈಮಾನಿಕ ಬಾಂಬ್ ದಾಳಿಗಳನ್ನು ಉಲ್ಲೇಖಿಸಿ ಪಾಕಿಸ್ತಾನವನ್ನು ಪ್ರಶ್ನಿಸಿದೆ. ವಿಶ್ವಸಂಸ್ಥೆಯಲ್ಲಿನ ಭಾರತದ ಖಾಯಂ ಪ್ರತಿನಿಧಿ ಪಿ. ಹರೀಶ್, ಪಾಕಿಸ್ತಾನದ ವಿರುದ್ಧ ವಾಗ್ದಾಳಿ ನಡೆಸಿ, ಇಸ್ಲಾಮಿಕ್ ಸಹಕಾರ ಸಂಘಟನೆ -ಓಐಸಿಯನ್ನು ಭಾರತದ ವಿರುದ್ಧ ವ್ಯವಸ್ಥಿತ ಅಸ್ತ್ರವಾಗಿ ಬಳಸಿಕೊಳ್ಳಲು ಪಾಕಿಸ್ತಾನ ನಿರಂತರ ಪ್ರಯತ್ನಿಸುತ್ತಿದೆ ಮತ್ತು ಈ ಸಂಘಟನೆಯ ಮೂಲಕ ಭಾರತದ ವಿರುದ್ಧ ಪದೇ ಪದೇ ಆಧಾರರಹಿತ ಆರೋಪಗಳನ್ನು ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಧಾರ್ಮಿಕ ಅಸ್ಮಿತೆಯನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಪ್ರವೃತ್ತಿಯು ಅಪಾಯಕಾರಿ ಎಂದು ಅವರು ವಿಶ್ವಸಂಸ್ಥೆಗೆ ತಿಳಿಸಿದರು. ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಮುಸ್ಲಿಂ ಜನಸಂಖ್ಯೆಯನ್ನು ಹೊಂದಿರುವ ದೇಶಗಳಲ್ಲಿ ಒಂದಾಗಿದ್ದು, ಸುಮಾರು ೨೦ ಕೋಟಿಗೂ ಅಧಿಕ ಇಸ್ಲಾಂ ಧರ್ಮೀಯರಿಗೆ ನೆಲೆಯಾಗಿದೆ ಎಂದು ಖಾಯಂ ಪ್ರತಿನಿಧಿ ಪಿ.ಹರೀಶ್ ಒತ್ತಿ ಹೇಳಿದರು.

<>><><*><><<>

ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದ ದ್ವಿಪಕ್ಷೀಯ ಸಂಬಂಧಗಳಲ್ಲಿ ಒಂದು ಪ್ರಮುಖ ತಿರುವಾಗಿದೆ ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಬ್ರಸೆಲ್ಸ್ ಪ್ರವಾಸವನ್ನು ಯಶಸ್ವಿಯಾಗಿ ಸಂಪನ್ನಗೊಳಿಸಿದ ನಂತರ, ಹೇಳಿಕೆ ನೀಡಿರುವ ಅವರು, ಭಾರತ ಮತ್ತು ಐರೋಪ್ಯ ಒಕ್ಕೂಟ ನಡುವಿನ ಮುಕ್ತ ವ್ಯಾಪಾರ ಒಪ್ಪಂದ ಉಭಯ ಕಡೆಯ ಆರ್ಥಿಕ ಸಾಮರ್ಥ್ಯವನ್ನು ಅನಾವರಣಗೊಳಿಸುತ್ತದೆ. ಈ ಒಪ್ಪಂದದ ಪ್ರಯೋಜನಗಳನ್ನು ತಳಮಟ್ಟದಲ್ಲಿ ಸಾಕಾರಗೊಳಿಸಲು ವ್ಯಾಪಾರ ಮತ್ತು ಹೂಡಿಕೆಗೆ ಉತ್ತೇಜನ ಸೇರಿದಂತೆ ಪರಸ್ಪರ ಸಕ್ರಿಯ ಪಾಲ್ಗೊಳ್ಳುವಿಕೆಯ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿಸಿದ್ದಾರೆ. ತಮ್ಮ ಭೇಟಿಯ ಸಂದರ್ಭದಲ್ಲಿ ಅವರು, ಐರೋಪ್ಯ ಕೌನ್ಸಿಲ್ ಅಧ್ಯಕ್ಷ ಆಂಟೋನಿಯೊ ಕೊಸ್ಟಾ, ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೆಯೆನ್ ಮತ್ತು ಆಯೋಗದ ಉಪಾಧ್ಯಕ್ಷೆ ಕಾಜಾ ಕಲ್ಲಾಸ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಇದರ ಜೊತೆಗೆ ಐರೋಪ್ಯ ಒಕ್ಕೂಟದ ಕೆಲವು ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರೊಂದಿಗೂ ಡಾ.ಎಸ್.ಜೈಶಂಕರ್ ಪ್ರತ್ಯೇಕ ದ್ವಿಪಕ್ಷೀಯ ಮಾತುಕತೆ ನಡೆಸಿದರು.

<>><><*><><<>

ಅಮೆರಿಕ ಇಂಧನ ಭದ್ರತೆಯನ್ನು ಬಲಪಡಿಸುವ ಉದ್ದೇಶದಿಂದ ಅಮೆರಿಕ ಇಂಡೋ ಫೆಸಿಫಿಕ್ ಪಾಲುದಾರ ರಾಷ್ಟ್ರಗಳೊಂದಿಗೆ ಸುಮಾರು ೫೬ ಶತಕೋಟಿ ಡಾಲರ್ ಮೌಲ್ಯದ ಬೃಹತ್ ಇಂಧನ ಒಪ್ಪಂದಗಳನ್ನು ಮಾಡಿಕೊಂಡಿದೆ. ಜಪಾನ್‌ನಲ್ಲಿ ನಡೆದ ಮೊಟ್ಟಮೊದಲ ಇಂಡೋ ಫೆಸಿಫಿಕ್ ಇಂಧನ ಭದ್ರತಾ ಸಮ್ಮೇಳನದಲ್ಲಿ ಈ ಮಹತ್ವದ ಒಪ್ಪಂದಗಳಿಗೆ ಅಂತಿಮ ರೂಪ ನೀಡಲಾಗಿದೆ. ಮಿತ್ರ ರಾಷ್ಟ್ರಗಳಿಗೆ ಇಂಧನ ರಫ್ತನ್ನು ವಿಸ್ತರಿಸುವ ಮತ್ತು ರಾಜಕೀಯವಾಗಿ ಸೂಕ್ಷ್ಮ ಅಥವಾ ಅನಿಶ್ಚಿತ ಮೂಲಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಅಮೆರಿಕ ಅಧ್ಯಕ್ಷ

ಡೋನಾಲ್ಡ್ ಟ್ರಂಪ್ ಅವರ ನೀತಿಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಮೆರಿಕ ಆಂತರಿಕ ಕಾರ್ಯದರ್ಶಿ ಡೌಗ್ ಬರ್ಗಮ್ ತಿಳಿಸಿದ್ದಾರೆ.

<>><><*><><<>

ರೈತರಿಗೆ ಪಾರದರ್ಶಕತೆ, ಹೊಣೆಗಾರಿಕೆ ಮತ್ತು  ವಿಮಾ ಮೊತ್ತದ ಸಕಾಲಿಕ ಪಾವತಿಯನ್ನು ಖಚಿತಪಡಿಸಲು ಸರ್ಕಾರ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿದೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ. ಲೋಕಸಭೆಯಲ್ಲಿಂದು ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಈ ಹಿಂದೆ ರೈತರು ತಮ್ಮ ಖಾತೆಗೆ ವಿಮಾ ಹಣ ಜಮೆಯಾಗಲು ಹಲವು ತಿಂಗಳು ಕಾಯಬೇಕಾದ ಪರಿಸ್ಥಿತಿ ಇತ್ತು. ಆದರೆ ಹೊಸ ನಿಯಮದಂತೆ ವಿಮಾ ಕಂಪನಿಗಳು ರೈತರ ಹಕ್ಕುಗಳನ್ನು ೨೧ ದಿನಗಳೊಳಗೆ ಇತ್ಯರ್ಥಪಡಿಸಲು ವಿಫಲವಾದರೇ ಬಾಕಿಮೊತ್ತಕ್ಕೆ ಶೇಕಡ ೧೨ರಷ್ಟು ಬಡ್ಡಿ ಸೇರಿಸಿ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದರು. ವಿಮಾ ಇತ್ಯರ್ಥಕ್ಕೆ ಸಂಬಂಧಿಸಿದ ಯಾವುದೇ ದೂರು ಅಥವಾ ಅಸಮಾಧಾನಗಳಿದ್ದರೆ ರೈತರು ಕೃಷಿ ರಕ್ಷಕ ಪೋರ್ಟಲನಲ್ಲಿ ದೂರು ದಾಖಲಿಸಹುದು. ಈವರೆಗೆ ಈ ಪೋರ್ಟಲನಲ್ಲಿ ಸುಮಾರು ೨ ಲಕ್ಷದ ೭೧ ಸಾವಿರ ದೂರುಗಳು ದಾಖಲಾಗಿದ್ದು, ಇವುಗಳ ಬಗ್ಗೆ ತನಿಖೆ ನಡೆಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ರೈತರಿಗೆ ನ್ಯಾಯಯುತ ಬೆಲೆ ನೀಡಲು ಸರ್ಕಾರ ಕನಿಷ್ಠ ಬೆಂಬಲ ಬೆಲೆಯಡಿ ಬೆಳೆಗಳನ್ನು ಖರೀದಿಸುತ್ತಿದೆ. ಈ ವರ್ಷ ಗೋಧಿ, ಭತ್ತೆ, ಎಣ್ಣೆಕಾಳು ಮತ್ತು ಬೆಳೆಕಾಳುಗಳ ಎಂಎಸ್‌ಪಿ ದರಗಳನ್ನು ಹೆಚ್ಚಿಸಲಾಗಿದೆ ಎಂದು ತಿಳಿಸಿದರು.

<>><><*><><<>

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭಾರತೀಯ ಚುನಾವಣಾ ಆಯೋಗ ಕೈಗೊಂಡಿರುವ ಆಡಳಿತಾತ್ಮಕ ವರ್ಗಾವಣೆಗಳ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, ರಾಜ್ಯ ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾದ ಕೆಲವೇ ಗಂಟೆಗಳಲ್ಲಿ ಆಡಳಿತ ವ್ಯವಸ್ಥೆಯ ಉನ್ನತ ಮಟ್ಟದ ಅಧಿಕಾರಿಗಳನ್ನು ಚುನಾವಣಾ ಆಯೋಗ ಏಕಾಏಕಿ ತೆರವುಗೊಳಿಸಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಚುನಾವಣಾ ಆಯೋಗದ ಆದೇಶದ ಮೇರೆಗೆ ವರ್ಗಾವಣೆಗೊಂಡವರಲ್ಲಿ ಪಶ್ಚಿಮ ಬಂಗಾಳ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ ಹಾಗೂ ಪೊಲೀಸ್ ಮಹಾ ನಿರ್ದೇಶಕರು ಸೇರಿದ್ದಾರೆ ಎಂದು ಪತ್ರದ ಮುಖೇನ ತಿಳಿಸಿದ್ದಾರೆ.

<>><><*><><<>

ಫ್ರಾನ್ಸ್‌ನಲ್ಲಿ ಇಂದಿನಿಂದ ಆರಂಭವಾಗಲಿರುವ ಪ್ರತಿಷ್ಠಿತ ಆರ್ಲಿಯೆನ್ಸ್ ಮಾಸ್ಟರ್ಸ್ ಸೂಪರ್ ೩೦೦ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲನ್ನು ಕಿಡಂಬಿ ಶ್ರೀಕಾಂತ್, ಉದಯೋನ್ಮುಖ ತಾರೆಯರಾದ ಆಯಷ್‌ಶೆಟ್ಟಿ ಮತ್ತು ತನ್ವಿ ಶರ್ಮ ಮುನ್ನಡೆಸಲಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕಿಡಂಬಿ ಶ್ರೀಕಾಂತ್, ಆಯುಷ್‌ಶೆಟ್ಟಿಯ ಜೊತೆಗೆ ತರುಣ್ ಮನ್ನೆಪಲ್ಲಿ ಮತ್ತು ಕಿರಣ್ ಜಾರ್ಜ್ ಕೂಡ ಭಾರತದ ಪರವಾಗಿ ಕಣಕ್ಕಿಳಿಯುತ್ತಿದ್ದಾರೆ. ಮಹಿಳಾ ಸಿಂಗಲ್ಸ್‌ನಲ್ಲಿ ತನ್ವಿ ಶರ್ಮ ಸ್ಪರ್ಧಿಸುತ್ತಿದ್ದಾರೆ. ಹೆಚ್.ಎಸ್.ಪ್ರಣಯ್, ಲಕ್ಷ್ಯಸೇನ್ ಮತ್ತು ಪಿ.ವಿ.ಸಿಂಧು, ಈ ಪಂದ್ಯಾವಳಿಯಲ್ಲಿ ಸ್ಪರ್ಧಿಸುತ್ತಿಲ್ಲ. ಮಿಶ್ರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ ಮತ್ತು ಧ್ರುವ್ ಕಪಿಲಾ ಜೋಡಿ ಹಾಗೂ ರೋಹನ್ ಕಪೂರ್ ಮತ್ತು ಋತ್ವಿಕಾಗಡ್ಡೆ ಜೋಡಿ ಭಾರತದ ಪರವಾಗಿ ಕಣಕ್ಕಿಳಿಯುತ್ತಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**